**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.402/2017**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸರು ಸೇಡಂ.

-ಃಃ ವಿರುದ್ಧ ಃಃ-

ಆರೋಪಿಃ ನಾರಯಣಮ್ಮ ಗಂಡ ಬಸವರಾಜ ಕಲಾಲ,
ವಃ 45 ವರ್ಷ, ಉಃ ಕೂಲಿ ,
ಸಾಃ ಗೌನಳ್ಳಿ, ತಾಃ ಸೇಡಂ.

----

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ. ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತರಾದ ನೀವು ದಿನಾಂಕ 24-12-2013 ರಂದು ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಸೇಡಂ ಅಬಕಾರಿ ಪೊಲೀಸ್ ಠಾಣಾ ಹದ್ದಿಯಲ್ಲಿರುವ ಸೇಡಂ ತಾಲೂಕಿನ ಗೌನಳ್ಳಿ ಗ್ರಾಮದ ನಿಮ್ಮ ಚಹಾ ಹೋಟೆಲದಲ್ಲಿ 1 ಕಟ್ಟಿಗೆಯ ಕಪಾಟಿನ ಹಿಂದುಗಡೆ 1 ರಟ್ಟಿನ ಪೆಟ್ಟಿಗೆಯಲ್ಲಿ Original choice whiskey 190ml. 48 ಬಾಟಲಿಗಳನ್ನು ಇಟ್ಟುಕೊಂಡು ಯಾವುದೆ ಅಧಿಕೃತ ಪರವಾನಿಗೆ ಇಲ್ಲದೆ ಸಾರ್ವಜನಿಕರಿಗೆ ಮಾರಾಟ ಮಾಡಲು ಇಟ್ಟುಕೊಂಡಿದ್ದಾಗ ಅಭಕಾರಿ ಅಧಿಕಾರಿಗಳು ಪಂಚರ ಸಮಕ್ಷಮ ದಾಳಿ ಮಾಡಿದಾಗ ದೊರೆತಿದ್ದು ಕಾರಣ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 43 ರ ಅಡಿಯಲ್ಲಿ ಅಪರಾಧವೆಸಗಿದ್ದು , ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ

ದಿನಾಂಕಃ 27-12-2023 ಪ್ರ.ದ.ನ್ಯಾದಂ. ಸೇಡಂ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.402/2017**

ಫಿರ್ಯಾದಿಃ     ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸರು ಸೇಡಂ.

-ಃಃ ವಿರುದ್ಧ ಃಃ-

ಆರೋಪಿಃ ನಾರಾಯಣಮ್ಮ ಗಂಡ ಬಸವರಾಜ ಕಲಾಲ

ಆರೋಪಿತರ  ಹೇಳಿಕೆ

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ-

(ದೋಷಾರೋಪಣೆಯನ್ನು ಆರೋಪಿತಳಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ

ದಿನಾಂಕ 27-12-2023                                ಪ್ರ.ದ.ನ್ಯಾದಂ. ಸೇಡಂ.